

ಕು ಚಿ ಸುರಂಗಗಳ ಚಿತ್ರಣ


ಅಮೆರಿಕ ಪಡೆಯಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳು


ಫಿರಂಗಿ ದಾಳಿ ನಡೆಸುತ್ತಿದ್ದ ವಿಯೆಟ್ನಾಮಿ ಮಹಿಳಾ ತಂಡ

ಹತ್ತಿರ ಹೋಗಲು ಆಗದಂತೆ ಹಲವು ರೀತಿಯ ಟ್ರ್ಯಾಪ್‌ಗಳನ್ನು ಇರಿಸಲಾಗಿತ್ತು. ಕೊನೆಗೆ ಕಾರ್ಪೆಟ್ ಬಾಂಬ್‌ಗಳ ಮೂಲಕ ಸುರಂಗ ವ್ಯವಸ್ಥೆಗೆ ಭಾಗಶಃ ಹಾನಿ ಮಾಡಲಾಯಿತು.

ಅಮೆರಿಕದ ಸೈನಿಕರು ಸುರಂಗದೊಳಗೆ, ಬಿಸಿ ಟಾರ್, ವಿಷಗಾಳಿ, ನೀರು ಸುರಿದರೂ ವಿಯೆಟ್ನಾಮಿಯರು, ಸುರಂಗದ ಕತ್ತಲಿನಲ್ಲಿ, ವಿವಿಧ ದಾರಿ ಹಿಡಿದು, ತಪ್ಪಿಸಿಕೊಳ್ಳುತ್ತಿದ್ದರು. ಸುರಂಗಗಳನ್ನು ನಿರ್ನಾಮ ಮಾಡಲು ಅಮೆರಿಕದವರಿಂದ ಬಾಂಬ್‌ಗಳ ಸತತ ದಾಳಿ ಕೂಡ ನಡೆಯಿತು. ತರಬೇತಿ ಪಡೆದ ಅಮೆರಿಕದ ಸೈನಿಕರು ಬೆಳಕಿನ ದೊಂದಿ, ಕತ್ತಿ ಹಿಡಿದು, ಇಂಚು ಇಂಚಾಗಿ ಈ ಸುರಂಗಗಳನ್ನು ಶೋಧಿಸಲು ಶುರುಮಾಡಿದರು. ಈ ಸೈನಿಕರನ್ನು 'ಸುರಂಗದ ಇಲಿ' (Tunnel Rats) ಎಂದು ಕರೆಯಲಾಗುತ್ತಿತ್ತು.

ಸೈಗಾನ್‌ನ 'ವಾರ್ ಮ್ಯೂಸಿಯಂ'ನಲ್ಲಿ ಅಮೆರಿಕ ದೇಶ, ಇಲ್ಲಿಯ ಜನರನ್ನು ಗೆರಿಲ್ಲಾ ಸೈನಿಕರಿಗೆ ಸಹಾಯ ಮಾಡುತ್ತಿರಬಹುದೆಂಬ ಸಂಶಯದಿಂದ ಮಕ್ಕಳು, ಹೆಂಗಸರು, ವೃದ್ಧರೆಂಬ ಭೇದಭಾವವಿಲ್ಲದೆ ಏಜೆಂಟ್ ಆರೆಂಜ್ ಎಂಬ ವಿಷದಿಂದ, ನಾಪಾಮ್ ಬಾಂಬ್‌ಗಳಿಂದ ಕೊಂದಿರುವ ಹಲವಾರು ಚಿತ್ರಗಳಿವೆ.

## ಇಲಿ ಬಿಲಗಳಂತಿದ್ದ ಮಾಯಾಲೋಕ

ಫ್ರೆಂಚ್ ಸೈನ್ಯದೊಂದಿಗೆ ನಡೆದ ಸುದೀರ್ಘ ಯುದ್ಧದ ಸಮಯದಲ್ಲಿ ಈ ಸುರಂಗಗಳನ್ನು ಮೊದಲು ರೂಪಿಸಲಾಯಿತು. ಆನಂತರ ಅಮೆರಿಕದೊಂದಿಗಿನ ದೀರ್ಘಾವಧಿ ಹೋರಾಟದಲ್ಲಿ ವಿಯೆಟ್ ಕಾಂಗ್ ಪಡೆಗಳು ಇವನ್ನು ಬಳಕೆ ಮಾಡಿಕೊಂಡವು.

ನೆಲದ ಮೇಲೆ ದಟ್ಟವಾದ ಮರಗಿಡಗಳಿಂದ ಆವೃತವಾದ ಕಾಡು, ನೆಲದಾಳದಲ್ಲಿ ಸುರಂಗ ವ್ಯವಸ್ಥೆ. ಇಲಿಗಳು ನೆಲದೊಳಗೆ ಬಿಲಗಳನ್ನು ತೋಡಿದಂತಿದ್ದವು. ವೈರಿ ಪಡೆಯ ದಾಳಿಯಿಂದ ತಪ್ಪಿಸಿಕೊಳ್ಳಲು, ಅಡಗಿಕೊಳ್ಳಲು ಹಾಗೂ ಸಮಯ ಸಾಧಿಸಿ ವೈರಿಗಳ ಮೇಲೆ ದಾಳಿ ಮಾಡಲು ಅನುಕೂಲವಾಗುವ ಹಾಗೆ ಈ ಸುರಂಗಗಳನ್ನು ರೂಪಿಸಿಕೊಂಡಿದ್ದರು.

ಸುರಂಗ ಮಾರ್ಗಗಳನ್ನು ತೋಡುವಾಗ ಮಣ್ಣನ್ನೆಲ್ಲಾ ಹತ್ತಿರದ ಸೈಗಾನ್ ನದಿಗೆ ಹಾಕುತ್ತಿದ್ದರು. ನೆಲದಡಿ ಶಸ್ತ್ರಾಸ್ತ್ರ ತಯಾರಿಸುವ, ಚಪ್ಪಲಿಗಳನ್ನು (ಶತ್ರುಗಳನ್ನು ದಾರಿ ತಪ್ಪಿಸಲು ತಿರುವು ಮುರುವಾಗಿ) ಹೊಲಿಯುವ, ಯುದ್ಧನಿರತರಿಗೆ ಬಟ್ಟೆ ಹೊಲಿಯುವ ವ್ಯವಸ್ಥೆಯಿತ್ತು. ಅಲ್ಲೊಂದು ಉನ್ನತಮಟ್ಟದ ರಕ್ಷಣಾ ವ್ಯವಸ್ಥೆಯನ್ನು ಅವರು ರೂಪಿಸಿಕೊಂಡಿದ್ದರು. ಅವರ ರಕ್ಷಣಾ ಕೇಂದ್ರಗಳಾಗಿ, ಸಂಪರ್ಕ ತಾಣವಾಗಿ, ಅಡಗುವ ಸ್ಥಳವಾಗಿ, ಆಹಾರ ಮತ್ತು ಆರೋಗ್ಯ ಕೇಂದ್ರವಾಗಿ ಬಳಕೆ ಮಾಡಿಕೊಂಡಿದ್ದರು.

## ಗತಕಾಲ ಚಿತ್ರಿಸುವ ಪ್ರದರ್ಶನ

ಈಗ ಕು ಚಿ ಪ್ರದೇಶದಲ್ಲಿ ಸುಮಾರು 121 ಕಿ.ಮೀ. ಸುರಂಗವನ್ನು ರಕ್ಷಿಸಿ ಇದನ್ನು ಪ್ರವಾಸಿಗರಿಗೆ ನೋಡಲು ಅನುಕೂಲ ಮಾಡಿಕೊಡಲಾಗಿದೆ. ಕೆಲವು ಭಾಗಗಳಲ್ಲಿ ಪ್ರವಾಸಿಗರು ಸುರಂಗದಲ್ಲಿ ಇಳಿದು ತೆವಳಿ ಹೊರಬರಬಹುದು. ಪ್ರವಾಸಿಗರಿಗಾಗಿ ಕೆಲವು ಸುರಂಗಗಳನ್ನು ದೊಡ್ಡದು ಮಾಡಿದ್ದಾರೆ. ಬೆಳಕಿಗಾಗಿ ವಿದ್ಯುತ್ ಅನುಕೂಲತೆಯನ್ನು ಈ ಸುರಂಗಗಳಲ್ಲಿ ಒದಗಿಸಿದ್ದಾರೆ.

ಪ್ರವಾಸಿಗರ ವೀಕ್ಷಣೆಗೆಂದು ಈಗ ಕು ಚಿ ಪ್ರದೇಶದಲ್ಲಿ ಆಗ ನಡೆಯುತ್ತಿದ್ದ ಚಟುವಟಿಕೆಗಳ ಪ್ರದರ್ಶನ ಕೂಡ ಇದೆ. ಅಮೆರಿಕ ಪಡೆಗಳಿಂದ ವಶಪಡಿಸಿಕೊಂಡ ಟ್ಯಾಂಕರ್‌ಗಳಿವೆ. ಆಗ ಬಳಸುತ್ತಿದ್ದ ನೆಲಬಾಂಬುಗಳು, ಬಂದೂಕು ಮುಂತಾದ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಿದ್ದಾರೆ. ಪ್ರವಾಸಿಗರು ಯುದ್ಧಾನುಭವ ಹೊಂದಲೆಂದು ಬಂದೂಕಿನಿಂದ ಮರಳು ದಿಮ್ಮೆಯೆಡೆಗೆ ಗುಂಡು ಹಾರಿಸುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಈ ಗುಂಡಿನ ಶಬ್ದ ಕೇಳಿಸುವಾಗ, ಈಗಲೂ ಯುದ್ಧ ನಡೆಯುತ್ತಿದೆಯೇನೋ ಅನಿಸುತ್ತದೆ!

ಪ್ರತಿಕ್ರಿಯಿಸಿ: feedback@sudha.co.in